



# ಅಮ್ಮಾ ನಿನ್ನ ತೋಳಿನಲ್ಲಿ...

**ತಾಯಿ–ಮಗುವಿನ ಸಂಬಂಧ ವರ್ಣನೆಗೂ ನಿಲುಕದ್ದು; ಇಲ್ಲಿರುವುದು ಬೆಲೆ ಕಟ್ಟಲಾಗದ ಬಾಂಧವ್ಯ. ಅಂದ ಹಾಗೆ ಮೇ 13 ತಾಯಂದಿರ ದಿನ.**

■ ಅವನೀಶ್

*A man loves his sweetheart the most, his wife the best, but his mother the longest.*

– ಇದು ಐರಿಷ್ ಗಾದೆಮಾತು. ಪ್ರಪಂಚದಲ್ಲಿ ತಾಯಿ–ಮಗುವಿನ ಸಂಬಂಧ ಸುದೀರ್ಘವಾದದ್ದು. ಅದೊಂದು ವರ್ಣನಾತೀತ ಅನುಬಂಧ.

ಕನ್ನಡದ ಹೆಸರಾಂತ ಕಾದಂಬರಿಕಾರ್ತಿ ತ್ರಿವೇಣಿ ಅವರ ಕಾದಂಬರಿ ಆಧಾರಿತ 'ಹೂವು–ಹಣ್ಣು' ಸಿನಿಮಾ (1993) ನೋಡಿದ್ದೀರಾ..? ತಾಯಿ– ಮಗಳ ಅದಮ್ಯ ಪ್ರೀತಿ ವಾತ್ಸಲ್ಯವನ್ನು ಅಭಿವ್ಯಕ್ತಿಸುವ ಅಪೂರ್ವ ಸಿನಿಮಾ ಇದು. ಇತ್ತೀಚೆಗೆ ಬಂದ ಶಿವರಾಜ್‌ಕುಮಾರ್ ಅಭಿನಯದ 'ಜೋಗಿ' ಸಿನಿಮಾದಲ್ಲೂ ತಾಯಿಯ ಮೇಲೆ ಮಗನಿಗಿರುವ ಅಗಾಧವಾದ ಪ್ರೀತಿ ಎದ್ದು ಕಾಣುತ್ತದೆ. ಅಮ್ಮ–ಮಗುವಿನ ಪ್ರೀತಿಯ ಎಳೆಯನ್ನು ಆಧರಿಸಿದ ಸುಂದರ ಕಥಾನಕ ಇದು.

ತಾಯಿ–ಮಗುವಿನ ಸಂಬಂಧವನ್ನು ಬಿಂಬಿಸುವ ಅನೇಕ ಸಿನಿಮಾಗಳು, ಹಾಡುಗಳು, ಕತೆ–ಕಾದಂಬರಿಗಳು ಬಂದಿವೆ. ಎಲ್ಲವೂ ಭಾವನಾತ್ಮಕ ಸಂವೇದನೆಗಳ ಅಭಿವ್ಯಕ್ತಿ. ಈ ಅಪ್ರತಿಮ ಪ್ರೀತಿ ಹೋಲಿಕೆಗೆ, ವರ್ಣನೆಗೆ ನಿಲುಕದ್ದು.

ಮಕ್ಕಳಿಗೊಂದು ದಿನ, ಅಪ್ಪನಿಗೊಂದು ದಿನ, ಪ್ರೇಮಿಗಳಿಗೊಂದು ದಿನ, ಮಹಿಳೆಯರಿಗೆ ಒಂದು ದಿನ, ಶಿಕ್ಷಕರಿಗೊಂದು ದಿನ.. ಇದೀಗ ತಾಯಂದಿರಿಗೂ ಒಂದು ದಿನ. ಅಂದ ಹಾಗೆ ಮೇ 13 ತಾಯಂದಿರ ದಿನ. ಪ್ರತೀವರ್ಷ ಮೇ ತಿಂಗಳ ಎರಡನೇ ಭಾನುವಾರ 'ತಾಯಂದಿರ ದಿನ' ಆಚರಣೆ. ಪ್ರಪಂಚದ ವಿವಿಧ ದೇಶಗಳಲ್ಲಿಯೂ ಅಂದು ತಾಯಂದಿರ ದಿನ ಆಚರಿಸಲಾಗುತ್ತದೆ. ಒಂದು ಅರ್ಥದಲ್ಲಿ ವರ್ಷದ ಎಲ್ಲ ದಿನಗಳೂ ತಾಯಂದಿರ ದಿನವೇ ಆಗಿದ್ದರೂ ಒಂದು ದಿನ ವಿಶೇಷವಾಗಿ ಆಚರಿಸಲಾಗುವ ಈ ದಿನ ತಾಯಂದಿರಿಗೆ ಸಂಭ್ರಮದ ಕ್ಷಣ.

ಮಗಳಾಗಿ, ಮಡದಿಯಾಗಿ, ಅಮ್ಮನಾಗಿ, ಅಜ್ಜಿಯಾಗಿ ಜೀವನದಲ್ಲಿ ಹೆಣ್ಣಿನದು ಬಹುಮುಖಿ ವ್ಯಕ್ತಿತ್ವ. ಜೀವನಪೂರ್ತಿ ಆಕೆಯದು 'ಥ್ಯಾಂಕ್‌ಲೆಸ್ ಜಾಬ್'. ತಾಯಿಯಾಗಿ ಕಳೆಯುವ ದಿನಗಳು ಮಹಿಳೆಗೆ ಜೀವನದಲ್ಲಿ ಅನೇಕ ವಿಶಿಷ್ಟ ಅನುಭವ ನೀಡುತ್ತದೆ. ಅದು ಒಂದು ರೀತಿಯ ವಾತ್ಸಲ್ಯದ ಅನುಭೂತಿ. ಕರುಣೆ, ಮಮತೆ, ಪ್ರೀತಿ, ಸಹನೆಗಳ ಭಾವನಾತ್ಮಕ ಸೂಕ್ಷ್ಮಸಂವೇದನೆಗಳ ವಿಶಿಷ್ಟ ಮತ್ತು ಸಮ್ಮಿಶ್ರ ಭಾವ. ಮಗುವಿಗೆ ನಿಸ್ವಾರ್ಥ ಪ್ರೀತಿ ಸಿಗುವುದು ತಾಯಿಯಿಂದ. ಮಗು ತಾಯಿಯ ಹೊಟ್ಟೆಯಲ್ಲಿರುವಾಗಿನಿಂದಲೂ ಭಾವನಾತ್ಮಕ ಸಂಬಂಧ ಬೆಸೆದುಕೊಂಡಿರುತ್ತದೆ. ಅಂದಿನಿಂದ ಜೀವನದುದ್ದಕ್ಕೂ ಬೆಸೆಯುವ ಈ ಸಂಬಂಧ ಅಕ್ಷರಗಳಲ್ಲಿ ಕಟ್ಟಿಕೊಡಲಾಗದಷ್ಟು ಗಾಢವಾದದ್ದು.

## ಐತಿಹಾಸಿಕವಾಗಿ

ಇತಿಹಾಸದ ಪುಟಗಳನ್ನು ತಿರುವಿದರೆ ಮದರ್ಸ್ ಡೇ ಆಚರಣೆ ಪ್ರಾಚೀನ ಗ್ರೀಕ್ ಮತ್ತು ರೋಮನ್‌ರ ಕಾಲದಿಂದಲೂ ಚಾಲ್ತಿಯಲ್ಲಿತ್ತು. ಬ್ರಿಟನ್‌ನಲ್ಲಿ ಈ ದಿನವನ್ನು 'ಮದರಿಂಗ್ ಸಂಡೆ' ಎಂದು ಕರೆಯಲಾಗುತ್ತದೆ. ಮದರ್ಸ್ ಡೇ ಅನ್ನು ಭಾರತವೂ ಸೇರಿದಂತೆ ಅಮೆರಿಕ, ಬ್ರಿಟನ್, ಡೆನ್ಮಾರ್ಕ್, ಫಿನ್ಲೆಂಡ್, ಇಟಲಿ, ಟರ್ಕಿ, ಆಸ್ಟ್ರೇಲಿಯ, ಮೆಕ್ಸಿಕೊ, ಕೆನಡಾ, ಚೀನಾ ಜಪಾನ್, ಬೆಲ್ಜಿಯಂಗಳಲ್ಲಿ ಆಚರಿಸಲಾಗುತ್ತದೆ. ಈ ದಿನ ಪೂರ್ತಿ ತಾಯಿಗೆ ಗೌರವ ಮತ್ತು ಪ್ರೀತಿಪೂರ್ವಕ ನಮನ ಸಲ್ಲಿಸಲು ಮೀಸಲು. ತಾಯಿಗೆ ಮಕ್ಕಳು ವಿವಿಧ ರೀತಿಯ ಉಡುಗೊರೆ ಕೊಟ್ಟು ಆಚರಿಸುವುದು ಕೂಡ ಇದೆ.

ಹೀಗೆ ಶತಮಾನಗಳಿಂದಲೂ ತಾಯಿ–ಮಗುವಿನ ಬಾಂಧವ್ಯ ಗಟ್ಟಿಯಾಗಲು, ಪ್ರೀತಿ–ವಾತ್ಸಲ್ಯಗಳ ಭಾವನಾತ್ಮಕ ಸಂವೇದನಗಳ ಅಭಿವ್ಯಕ್ತಿಗೆ 'ತಾಯಂದಿರ ದಿನ'ವನ್ನು ಸಾಂಕೇತಿಕವಾಗಿ ಆಚರಿಸುವ ಪದ್ಧತಿ ಬೆಳೆದು ಬಂತು. ವರ್ಷಪೂರ್ತಿ ಅಮ್ಮ ಮಕ್ಕಳಿಗಾಗಿ ನಿಸ್ವಾರ್ಥವಾಗಿ ಮಾಡುವ ಸೇವೆಗೆ ಪ್ರತಿಫಲವಾಗಿ ಒಂದು ದಿನ ಅಮ್ಮನನ್ನು ಮಕ್ಕಳು ಪ್ರೀತಿಯ ಕಾಣಿಕೆ ನೀಡುವ ಮೂಲಕ ಗೌರವ ಸೂಚಿಸುವ ಸಲುವಾಗಿಯೇ ತಾಯಂದಿರ ದಿನ ಆಚರಿಸಲಾಗುತ್ತದೆ.

ವಿದೇಶಗಳಲ್ಲಿ ಅಂದು ತಾಯಿಯ ಶ್ರೇಯೋಭಿವೃದ್ಧಿಗೆ ಚರ್ಚ್‌ನಲ್ಲಿ ವಿಶೇಷ ಪ್ರಾರ್ಥನೆ ನಡೆಸುವರು. ಕೇಕ್ ತಯಾರಿಸಿ ವಿಶೇಷ ಉಡುಗೊರೆ ನೀಡವ ಸಂಪ್ರದಾಯವೂ ಇದೆ. ಎಲ್ಲ ದಿನಾಚರಣೆಗಳಂತೆ ಇದೀಗ ನಮ್ಮಲ್ಲೂ ತಾಯಂದಿರ ದಿನ ಆಚರಣೆಗೆ ಮಹತ್ವ ಬಂದಿದೆ. ■

